(ಉ) ಮಹಾನಗರ ಪಾಲಿಕೆಯು ನೀಡಿರುವ ಹಣದ ವಿವರಗಳನ್ನು ಕೆಳಗೆ ನೀಡಲಾಗಿದೆ :–

ವರ್ಷ	ಹಣ ಬಿಡುಗಡೆ ಮಾಡಿರುವುದು (ಲಕ್ಷ ರೂ.ಗಳಲ್ಲಿ)	ಉದ್ದೇಶ
2001-01	20.00	Bridge Loan
2002-03	6.00	Shifting of rejects
2003-04	4.81	Purchase of Plastic Sheet
2004-05	10.46	Cost of high roof shed.
2005-06	5.00	Repair and fabrication of plant

747 (821) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :–ಪಶು ಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಸ್ತಿತ್ವಕ್ಕೆ ತೀವ್ರ ಅಪಾಯಕಾರಿ ರೀತಿಯಲ್ಲಿ ಮತ್ತು ಈ ಸಂಘಗಳಿಗೆ ಪರ್ಯಾಯವಾಗಿ ಖಾಸಗಿ ಡೈರಿಗಳನ್ನು ಪ್ರೋತ್ಸಾಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ, ಈ ಚಟುವಟಿಕೆಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :–

(ಅ) ಕೇಂದ್ರ ಸರ್ಕಾರದ ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ 1992 ರ ಪ್ರಕಾರ ಪ್ರತಿ ದಿನ 10000 ಲೀಟರ್‌ಗಳಿಗಿಂತಲೂ ಹೆಚ್ಚು ಹಾಲನ್ನು ಸಂಗ್ರಹಿಸುವ ಪರಿಷ್ಕರಿಸುವ ಡೈರಿ ಘಟಕಗಳಿಗೆ ಪರವಾನಗಿಯನ್ನು ನಿಯಮದಡಿ ನೀಡಲಾಗುತ್ತಿದೆ. ಆದರೆ ಈ ಖಾಸಗಿ ಡೈರಿ ಘಟಕಗಳನ್ನು ಸ್ಥಾಪಿಸಲು ಅವುಗಳಿಗೆ ಸರ್ಕಾರ/ಕೆ.ಎಂ.ಎಫ್ ಯಾವುದೇ ರೀತಿಯ ಪ್ರೋತ್ಸಾಹ ಧನ ಸೌಲಭ್ಯಗಳನ್ನು ಒದಗಿಸುತ್ತಿಲ್ಲ.

(ಆ) ಯಾವುದೇ ಪ್ರೋತ್ಸಾಹ ಧನ ಸೌಲಭ್ಯಗಳನ್ನು ನೀಡುತ್ತಿಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ 1992ರ ಪ್ರಕಾರ ನಿಯಮದಡಿ ಪರವಾನಗಿ ಪಡೆದ ಡೈರಿ ಘಟಕಗಳು ಗುಣಮಟ್ಟದ ಹಾಲನ್ನು ಸಂಗ್ರಹಿಸಿ ಸಂಸ್ಕರಿಸಿ ಮಾರಾಟ ಮಾಡಲು ಅವಕಾಶವಿದ್ದು ಕಳಪೆ ಗುಣಮಟ್ಟದ ಅಥವಾ ಕಲಬೆರಕೆ ಹಾಲನ್ನು ಸರಬರಾಜು/ ಮಾರಾಟ ಮಾಡಿದ್ದಲ್ಲಿ ಆಹಾರ ಕಲಬೆರಕೆ ನಿಯಂತ್ರಣ ಕಾಯ್ದೆ 1954ರಡಿ ಮೊಕದ್ದಮೆ ಹೂಡಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಮಾಡಲು ಅವಕಾಶವಿರುತ್ತದೆ.

748 (822) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :–